## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.2273/2017

ಸಿಡಬ್ಲ್ಯೂ6 ಪಿಡಬ್ಲ್ಯೂ4

ಸಾಕ್ಷಿಯ ಹೆಸರು - ಕಿರಣ ಸಿದ್ದಪ್ಪ ಚಂದರಗಿ

ವಯಸ್ಸು - 35 ವರ್ಷ

ಉದ್ಯೋಗ - ಅಬಕಾರಿ ನಿರೀಕ್ಷಕರು, ಅಥಣಿ

ವಾಸ - ಅಥಣಿ

ದಿನಾಂಕಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ**

ನಾನು ನವೆಂಬರ್ 2016 ರಿಂದ ಜೂನ್ 2020 ರವರೆಗೆ ಗೋಕಾಕ ವಲಯದಲ್ಲಿ ಅಬಕಾರಿ ಉಪನೀರಿಕ್ಷಕರು ಅಂತಾ ಕಾರ್ಯನಿರ್ವಹಿಸಿರುತ್ತೇನೆ.

ದಿಃ 17-01-2017 ರಂದು ಚಾಸಾ 1 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ದಿಃ 18.01.2017 ರಂದು ರಾಸಾಯನಿಕ ಪರೀಕ್ಷೆಯ ವರದಿಯನ್ನು ಸ್ವಿಕರಿಸಿಕೊಂಡು ಚಾಸಾ 3 ರವರ ಹೇಳಿಕೆ ಪಡೆದುಕೊಂಡೆನು. ಚಾಸಾ 4 ರವರ ರೇಡ ಹೇಳಿಕೆ ಪಡೆದುಕೊಂಡೆನು, ದಿಃ 20.03.2017 ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿತರ ವಿರುದ್ದ ದೋಷಾರೊಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ರಾಸಾಯನಿಕ ಪರೀಕ್ಷೆಯ ವರದಿ ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದಿಃ 31 ನೇ ಡಿಸೆಂಬರ ನಂದು ಸಾಮಾನ್ಯವಾಗಿ ಎಲ್ಲಾ ಕಡೆ ಜನರು ಪಾರ್ಟಿ ಮಾಡುತ್ತಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ನಾವು ಗಸ್ತು ಮಾಡುತ್ತೇವೆ ಎಂದರೆ ಸರಿ. ಆ ಕಾಲಕ್ಕೆ ಅನದಿಕೃತವಾಗಿ ಏನಾದರೂ ಸಿಕ್ಕರೆ ನಾವು ಜಪ್ತಿ ಪಡಿಸಿಕೊಳ್ಳುತೇ ಎಂದರೆ ಸರಿ. ಈ ಪ್ರಕರಣಲ್ಲಿ ನಾನನು ಗುನ್ನಾ ಸ್ಥಳಕೆ ಹೊಗಿದ್ದೆ ಆರೋಪಿ ತಲೆಮರೆಸಿಕೊಂಡಿದ್ದ, ನನ್ನ ತನಿಖೆ ಕಾಲದಲ್ಲಿ ಆರೋಪಿ ಯು ರಾಜನಕಟ್ಟಿ ಗ್ರಾಮದ ಗ್ರಾಮ ಪಂಚಾಯತಿಯಸದಸ್ಯ ರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ, ಚಾಸಾ 1 ಹಾಗೂ ಆರೋಪಿ ಯ ಮದ್ಯೆ

ವೈಮನಸ್ಸು ಇದ್ದಕಾರಣ ಖೊಟ್ಟ ದೂರುದಾಖಲಾಗಿದೆ ಎಂದರೆ ಸರಿಯಲ್ಲ, ಡಿಸೆಂಬರ 31 ರ ರಾತ್ರಿ ಯಾವುದೋ ಜಪ್ತಿ ಮಾಡಿದ ಬೇರೆ ಪ್ರಕರಣದ ಮುದ್ದೆಮಾಲಿನ ಈ ಪ್ರಕಣರದ ಆರೋಪಿ ಎಂದು ತೋರಿಸಿ ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ, ಪೋಲಿಸ್ ಠಾಣೆಯಲ್ಲಿ ಕುಳಿತು ಸುಳ್ಳು ಪಂಚನಾಮೆ ತಯಾರಿಸಿ ದೂರನ್ನು ದಾಖಲಾಗಿದೆ ಎಂದರೆ ಸರಿಯಲ್ಲ, ಚಾಸಾ 3 ಮತ್ತು 4 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ, ಚಾಸಾ 4 ರವರ ಹೇಳಿಕೆ ಯಾವ ದಿನಾಂಕದಿಂದು ಪಡೆದಿದ್ದೇನೆ ಎಂದು ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ಚಾಸಾ 1 ರ ಮಾತನ್ನು ಕೇಳಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ರೇಡ ಮಾಡಲು ಖಾಸಗಿ ವಾಹನದಲ್ಲಿ ಹೋಗಿದ್ದೇವೆ ಎನ್ನಲಾದ ಬಗ್ಗೆ ಸದರಿ ವಾಹನ ಸಂ. ನಮೂದಿಸಿಲ್ಲ ಎಂದರೆ ಸರಿ ಹಗಾೂ ಆ ವಾಹನದ ಚಾಲಕನು ಹೆಸರು ನಮೂದಿಸಿಲ್ಲ ಎಂದರೆ ಸರಿ. ಆ ವಾಹನದ ಆರ್ ಸಿ ದಾಖಲೆ ಪಡೆದಿಲ್ಲ ಎಂದರೆ ಸರಿ. ನಿಪಿ7 ದಾಖಲೆ ಈ ಕೇಸಿಗೆ ಅನೂಕೂಲವಾಗುವಂತೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ, ಆರೋಪಿಯ ವಿರುದ್ದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.